ಉಳುಮೆ ಮಾಡಿಲ್ಲ, ನಿನ್ನೆ ತಾನೇ ಮಳೆ ಬಂದಿದೆ. 1985ನೇ ಸಾಲಿನಲ್ಲೂ ಸಹ ಅಭಾವ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ಕಾಮಗಾರಿ ಕೆಲಸ ಕಾರ್ಯಗಳಿಗಾಗಿ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವರ್ಷ ಸಹ ಹಣ ಬಿಡುಗಡೆ ಮಾಡಿದ್ದೇವೆ. ಅವಶ್ಯಕತೆ ಇದ್ದರೆ ಹೆಚ್ಚು ಹಣ ಬಿಡುಗಡೆ ಮಾಡುತ್ತೇನೆ.

ವಿಷಯ : ಹೊಸದುರ್ಗ ತಾಲ್ಲೂಕಿನ ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು,

ಪ್ರ. ಸಂಖ್ಯೆ 91 (373) ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನು ಇದೆಯೇ ; ಹಾಗಿದ್ದಲ್ಲಿ ಅದರ ವಿಸ್ತೀರ್ಣವೆಷ್ಟು ;

ಆ) 1983-84 ಮತ್ತು 1984-85ನೇ ಸಾಲುಗಳಲ್ಲಿ ಸದರಿ ತಾಲ್ಲೂಕಿನಲ್ಲಿ ಯಾರಿಗಾದರೂ ಭೂಮಿ ಮಂಜೂರಾತಿ ಮಾಡಲಾಗಿದೆಯೆ ;

ಇ) ಹಳ್ಳಿಗಳಲ್ಲಿ ಇರುವ ಗೋಮಾಳ ಜಮೀನನ್ನು ಕಾಯ್ದಿರಿಸಬೇಕೆಂದು ನೀತಿ ನಿಯಮಗಳು ಇದೆಯೆ ;

ಈ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಗೋಮಾಳ ಜಮೀನನ್ನು ಕಾದಿರಿಸಿದೆ ;

ಉ) ಹೊಸದುರ್ಗ ತಾಲ್ಲೂಕಿನ ಗೋಮಾಳ ಜಮೀನುಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡಲಾಗುತ್ತಿದೆಯೆ ;

ಊ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಭೂ ರಹಿತ ಬಡ ರೈತರಿಂದ ಜಮೀನು ಮಂಜೂರಾತಿಗಾಗಿ ಅರ್ಜಿಗಳು ಬಂದಿವೆಯೇ ;

ಋ) ಹಾಗಿದ್ದಲ್ಲಿ 1983-84 ಮತ್ತು 1984-85ನೇ ಸಾಲುಗಳಲ್ಲಿ ಬಂದಿರುವ ದರಖಾಸ್ತು ಅರ್ಜಿಗಳ ಬಗ್ಗೆ ಕ್ರಮ ಕೈಕೊಳ್ಳಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೊಸದುರ್ಗ ತಾಲ್ಲೂಕಿನಲ್ಲಿ ಕಂದಾಯ ಇಲಾಖೆಗೆ ಸೇರಿದ ಗೋಮಾಳ ಮತ್ತು ಹುಲ್ಲುಬನ್ನಿ ಜಮೀನುಗಳು ಸೇರಿ ಒಟ್ಟು 60079-22 ಎಕರೆ ಇರುತ್ತದೆ.

ಆ) 1983-84ರಲ್ಲಿ ಇಬ್ಬರು ಸೈನಿಕ ವರ್ಗದವರಿಗೆ 20 ಎಕರೆಯನ್ನು ಹಾಗೂ 1984-85ರಲ್ಲಿ 69 ಜನ ಭೂ ರಹಿತರಿಗೆ 183 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ.

ಇ) ಕರ್ನಾಟಕ ಭೂ ಕಂದಾಯ ನಿಯಮ 97ರ ಪ್ರಕಾರ ಪ್ರತಿ ನೂರು ಜಾನುವಾರುಗಳಿಗೆ 12 ಹೆಕ್ಟೇರುಗಳಂತೆ ಮಿಸಲಿಡಬೇಕೆಂದು ನಿಯಮವಿರುತ್ತದೆ.

ಈ) ಸುಮಾರು 50,876-22 ಎಕರೆಯನ್ನು ಕಾದಿರಿಸಲಾಗಿದೆ,

ಉ) ಸುಮಾರು 2,882-28 ಎಕರೆ ಜಮೀನಿನಲ್ಲಿ ಅನಧಿಕೃತ ಸಾಗುವಳಿ ಇದೆ.

ಊ) 1983-84ರಲ್ಲಿ 1045 ಅರ್ಜಿಗಳು ಮತ್ತು 1984-85ರಲ್ಲಿ 496 ಅರ್ಜಿಗಳು ಬಂದಿರುತ್ತವೆ.

ಋ) ಅರ್ಹರಾದ ಅರ್ಜಿದಾರರಿಗೆ ಭೂ ಮಂಜೂರು ಮಾಡಲು ಕರ್ನಾಟಕ ಭೂ ಮಂಜೂರಾತಿ ನಿಯಮ 1969ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಜಿ. ರಾಮದಾಸ್.—ಮಾನ್ಯ ಸಭಾಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಮದಲು ಎಂಬ ಗ್ರಾಮದ ಹರಿಜನರಿಗೆ 75 ಎಕರೆ ಭೂಮಿ ಮಂಜೂರು ಆಗಿದೆ. ಆ ಭೂಮಿಯ ಸಾಗುವಳಿ ಚೀಟಿ ಇದೆ ಪಹಣಿ ಇದೆ, ಎಲ್ಲಾ ಅವರ ಹೆಸರಿನಲ್ಲಿದೆ. ಆ ಭೂಮಿಯನ್ನು ಬಲಾಡ್ಯರು ಬರೆಸಿಕೊಂಡಿದ್ದಾರೆ. ಸಂಬಂಧಪಟ್ಟ ತಹಶೀಲ್ದಾರರು ಭೂಮಿಯನ್ನು ಬಲಾಡ್ಯರಿಂದ ಬಿಡಿಸಿಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—1983-84ನೇ ಸಾಲಿನಲ್ಲಿ 1045 ಅರ್ಜಿಗಳು ಬಂದಿದ್ದವು. ಅದರಲ್ಲಿ 117 ಅರ್ಜಿಗಳು ಮಂಜೂರಾಗಿವೆ. ಇನ್ನುಳಿದ ಅರ್ಜಿಗಳು ಮಂಜೂರಾಗಿಲ್ಲ, ಅದೇರೀತಿ 1984-85ನೇ ಸಾಲಿನಲ್ಲಿ 496 ಅರ್ಜಿಗಳು ಬಂದಿದ್ದು ಅವುಗಳಲ್ಲಿ 74 ಅರ್ಜಿಗಳು ಮಂಜೂರಾಗಿದ್ದು, ಇನ್ನುಳಿದ ಅರ್ಜಿಗಳು ವಿಚಾರಣೆಯ ಹಂತದಲ್ಲಿವೆ.

ಶ್ರೀ ಜಿ. ರಾಮದಾಸ್.—ಮಂಜೂರಾಗಿರತಕ್ಕ ಜಮೀನು ಬಲಾಢ್ಯ ಜನಗಳ ಹತ್ತಿರವೇ ಇದ್ದು, ಈ ಬಡ ಜನಗಳಿಗೆ ಬಿಡಿಸಿಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಯಾರು ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೋ ಅವರಿಗೇ ಮಂಜೂರು ಮಾಡಿರುವುದು. ಬಿಡಿಸಿ ಕೊಡತಕ್ಕಂತಹ ಪ್ರಶ್ನೆ ಬರುವುದಿಲ್ಲ. ಒಂದುವೇಳೆ ಅಂತಹ ತಕರಾರು ಏನಾದರೂ ಇದ್ದರೆ, ಆ ಬಗ್ಗೆ ದೂರನ್ನು ಕೊಟ್ಟರೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ವಿಷಯ : ಹಿಡಕಲ್ ಜಲಾಶಯದ ಹತ್ತಿರ ಜಲವಿದ್ಯುತ್ ಘಟಕದ ಬಗ್ಗೆ ಗೋಕಾಕ್ ಜಲಪಾತದ ಎಡ ದಂಡೆಯ ಮೇಲೆ ಜಲವಿದ್ಯುತ್ ಘಟಕದ ಸ್ಥಾಪನೆ.

ಪ್ರ. ಸಂಖ್ಯೆ 92 (280) ಶ್ರೀ ವಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಿದ್ಯುತ್, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಹಿಡಕಲ್ ಜಲಾಶಯದ ಹತ್ತಿರ ಜಲವಿದ್ಯುತ್ ಘಟಕವನ್ನು ಸ್ಥಾಪಿಸುವುದು ನಿಜವೇ ;

ಆ) ಹಾಗಿದ್ದಲ್ಲಿ, ಈ ಘಟಕದ ವಿದ್ಯುತ್ ಉತ್ಪಾದನೆಯ ಶಕ್ತಿ ಎಷ್ಟು ;

ಇ) ಸದರಿ ವಿದ್ಯುತ್ ಘಟಕವನ್ನು ಸ್ಥಾಪನೆ ಮಾಡುವಲ್ಲಿ ತಡವಾಗುತ್ತಿರುವುದಕ್ಕೆ ಕಾರಣಗಳೇನು ಮತ್ತು ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು ;

ಈ) ಗೋಕಾಕ್ ಜಲಪಾತದ ಎಡಭಾಗದಲ್ಲಿ ದುಪದಾಳ ನೀರು ಸಂಗ್ರಹಾಲಯದಿಂದ ನೀರನ್ನು ಪಡೆದು ಈ ಘಟಕವನ್ನು ಪ್ರಾರಂಭಿಸಲು ಮನವಿ ಮಾಡಿಕೊಳ್ಳಲಾಗಿದೆಯೆ ;

ಉ) ಗೋಕಾಕ್ ಜಲಪಾತದ ಹತ್ತಿರ ವಿದ್ಯುತ್ ಘಟಕವನ್ನು ಸ್ಥಾಪಿಸಲು ನೀಲಿ ನಕ್ಷೆ ತಯಾರಿಸಲು ತಗೆದುಕೊಂಡ ಕ್ರಮಗಳೇನು ಮತ್ತು ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ, ಗಣಿ ಮತ್ತು ಭೂ ವಿಜ್ಞಾನ ಶಾಖೆ ಮಂತ್ರಿಗಳು).—

ಅ) ಹೌದು,

ಆ) ಪ್ರತಿಯೊಂದು 16 ಮೆಗಾವಾಟ್ ಸಾಮರ್ಥ್ಯದ ಎರಡು ಘಟಕಗಳನ್ನು ಸ್ಥಾಪಿಸುವ ಉದ್ದೇಶ ವಿದ್ದು ಸರಾಸರಿ ವರ್ಷಕ್ಕೆ 127 ದಶಲಕ್ಷ ಕಿಲೋವಾಟ್ ಹವರ್‌ನಷ್ಟು ವಿದ್ಯುಚ್ಛಕ್ತಿ ಉತ್ಪಾದಿಸುವ ಗುರಿಯಿದೆ.

ಇ) ಘಟಪ್ರಭಾ ಜಲವಿದ್ಯುತ್ ಯೋಜನೆಗೆ ಯೋಜನಾ ಆಯೋಗವು 1982ರ ಮೇ ತಿಂಗಳಲ್ಲಿ ಒಪ್ಪಿಗೆ ನೀಡಿದೆ. ಹಿಡಕಲ್ ಅಣೆಕಟ್ಟು ಸಂಪೂರ್ಣವಾಗಿದೆ. ಅಣೆಕಟ್ಟಿನಲ್ಲಿ 3.81 ಮಿ. ಘ್ಯಾಸದ ಎರಡು ಉಕ್ಕಿನ ಕೊಳವೆಗಳನ್ನು ಅಳವಡಿಸಲಾಗಿದೆ. ಮುಂದಿನ ಭಾಗದ ಉಕ್ಕಿನ ಕೊಳವೆ ಜೋಡಣೆ ಕಾರ್ಯ ಪ್ರಗತಿಯಲ್ಲಿದೆ, ಈ ಯೋಜನೆಗೆ ಈಗಿನ ಅಂದಾಜು ವೆಚ್ಚ 2792 ಲಕ್ಷ ರೂ.ಗಳು.

ಈ) ಹೌದು.

ಉ) ಕರ್ನಾಟಕ ವಿದ್ಯುತ್ ನಿಗಮದಿಂದ ಮತ್ತೊಮ್ಮೆ ಪೂರ್ಣ ವರದಿಯನ್ನು ಕೇಳಲಾಗಿದೆ.

ಶ್ರೀ ಎಂ. ಎಸ್. ಪಾಟೀಲ್.—ನನ್ನ ಈ ಪ್ರಶ್ನೆಗೆ ಹೌದು ಎಂಬುದಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಯಾರಿಂದ ಮನವಿ ಬಂದಿದೆ ? ಆ ಮನವಿ ಬಂದ ಮೇಲೂ ನಾನು ಹಲವಾರು ಸಲ ಇದರ ಬಗ್ಗೆ ಸರ್ಕಾರವನ್ನು ಕೇಳಿದ್ದೇನೆ, ನವ್ಯಲ್ಲಿ ಈಗಾಗಲೇ ವಿದ್ಯುಚ್ಛಕ್ತಿ ಕೊರತೆ ಇದೆ. ಸಮುದ್ರಕ್ಕೆ ನೀರು ಹರಿದು ಹೋಗುವುದಕ್ಕೆ ಬದಲಾಗಿ ಇದರಿಂದ ವಿದ್ಯುಚ್ಛಕ್ತಿಯನ್ನು ತಯಾರು ಮಾಡಿದರೆ ಹೆಚ್ಚು ಉಪಯೋಗವಾಗುತ್ತದೆ. ಇದನ್ನು ಮಾಡಲೇಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಮಾನ್ಯ ಶಾಸಕರಾದ ಶ್ರೀಮಾನ್ ಎಂ. ಎಸ್. ಪಾಟೀಲ್ ರವರು 23-3-85ರಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿದ್ದಲ್ಲದೆ ಮತ್ತೊಮ್ಮೆ ಪತ್ರ ಬರೆದಿದ್ದು, ದುಪದಾಳ ಸಂಗ್ರಹಾಲಯದಿಂದ ಹೆಚ್ಚು ನೀರನ್ನು ಮೇಲುಗಡೆಗೆ ತಂದು ಆದರಿಂದ ಗೋಕಾಕ್ ಫಾಲ್ಸ್‌ನಿಂದ ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕೆಂದು ಮನವಿಯನ್ನು ಕೊಟ್ಟಿದ್ದಾರೆ. ಅದು ಪುನ: ವಿದ್ಯುಚ್ಛಕ್ತಿ ಮಂಡಲಿಯಿಂದ ಪರಿಶೀಲನೆ ಯಾಗುತ್ತಿದೆ. ಮೂರನೇ ಘಟಕವನ್ನು ಅಲ್ಲಿ ಸ್ಥಾಪನೆ ಮಾಡಬೇಕೆ ಅಥವಾ ಬೇಡವೇ ಎಂಬುದನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.